ಆಕೆ ಏನು ಹೇಳ್ತಿದಾಳೋ ನನಗೆ ಅರ್ಥವಾಗಲಿಲ್ಲ.

ಆಕೆ ಆ ವಿಷಯ ತಲೆಗೆ ಹಚ್ಚಿಕೊಳ್ಳದವಳಂತೆ ಅವನತ್ತ ತಿರುಗಿದಳು.

ಸಂಭಾಷಣೆ ಮತ್ತೆ ಇಂಗ್ಲೀಷಿನಲ್ಲಿ ಶುರುವಾಯಿತು.

'ಚಿನ್ನೂ ಅಂಕಲ್‌ನ ನಮ್ಮ ಮನೇಗೆ ಕರೆದುಕೊಂಡು ಹೋಗೋಣ್ವಾ ಕಂದಾ ಡಿನ್ನರ್‌ಗೆ?'

'ಬೇಡ.'

'ಏ... ಯ್ ಅಂಕಲ್ ಅಲ್ವಾ?... ನಿನಗೆ ಹೆಲ್ಪ್ ಮಾಡ್ತಿದ್ದಾರಲ್ವಾ. ಮೆಡ್ರಾಸ್ ಅಂಕಲ್ ಹತ್ತಿರ ಕರ್ಕೊಂಡು ಹೋಗಿರಲಿಲ್ವ.'

'ನಾನು ಕೇಳಿದ್ನಾ?'

'ಕಂದಾ... ಹಂಗೆಲ್ಲ ಮಾತಾಡ್ಬೋದಾ? ತಪ್ಪಲ್ವಾ? ಅವರಿಗೆ ನಾವು ಮರ್‍ಯಾದೆ ಕೊಡಬೇಕು. ಅದು ಮ್ಯಾನರ್ಸ್. ನೀನು ಮ್ಯಾನರ್ಸ್ ಕಲಿತಿಲ್ವಾ?'

'ಇಲ್ಲ.'

'ಚಿನ್ನೂ.'

'ಚೀರಬೇಡ. ನನಗಿದೆಲ್ಲ ಇಷ್ಟ ಇಲ್ಲ. ಬೇಡ ಬೇಡ ಅಂತಿದ್ದರೂ ನೀನೇ ಬಲವಂತ ಮಾಡಿ ಕರಕೊಂಡು ಬಂದಿದೀಯ. ಆವಾಗಿಂದ ನೋಡ್ತಿದೀನಿ. ನೀವಿಬ್ಬರು ವಟವಟ ಮಾತಾಡಿಕೊಳ್ಳೋದು ಕೂಡ ನನಗಿಷ್ಟ ಆಗ್ಲಿಲ್ಲ. ಈತ ಅಂತೂ ಇನ್ನೂ ಇಷ್ಟ ಆಗ್ಲಿಲ್ಲ. ಮೊದಲು ಕಳಗಿಳಿಸು. ಹೋಗಣ.'

'ಚಿನ್ನೂ' ಮುಲುಗಿದಂತೆ ಚೀರಿದಳಾಕೆ.

ಚಿನ್ನು ಏನೂ ಮಾತಾಡಲಿಲ್ಲ.

ಆಕೆ ಬುಸುಗುಟ್ಟಿದಂತೆ ಗಾಳಿ ಬಿಟ್ಟು ಎರಡು ಕೈಗಳನ್ನೂ ಸ್ಟೀರಿಂಗ್ ಮೇಲೆ ದಬ್ ಎಂದು ಬಿಸಾಡಿ ಕಾರನ್ನು ವೇಗವಾಗಿ ಹಿಂದಕ್ಕೆ ತಿರುಗಿಸಿದಳು.

ನಾನು ಫೋನ್ ಮಾಡೋದು ಬಿಟ್ಟು ದಿಗ್ಭ್ರಮೆಗೊಂಡು ಕುಳಿತೆ.

ಮತ್ತೊಂದ್ಸಲ ಮಗುದೊಂದು ಸಲ ಆಗಿದ್ರೆ ನನ್ನ ರಿಯಾಕ್ಷನ್ ಏನಿರುತ್ತಿತ್ತೋ ಆಗಲಿ ಆಗ ಮಾತ್ರ ಆಕೆ ಹೇಳಿದಂತೆ ಅವನ ಮಾತುಗಳನ್ನು ತಲೆಗೆ ಹಚ್ಚಿಕೊಳ್ಳದಿರಲು ಪ್ರಯತ್ನಿಸಿದೆ.

ನನಗೆ ಆಕೆ ಮುಖ್ಯ. ಆಕೆ ಕೋರಿದಂತೆ ಆಕೆಯೊಂದಿಗೆ ಸ್ವಲ್ಪ ಹೊತ್ತಿನ ಮಾತುಕತೆ ಮುಖ್ಯ. ಆಕೆಯ ಕತೆ ತಿಳಿದುಕೊಳ್ಳಬೇಕು. ಅದಕ್ಕಾಗಿ ಇವತ್ತೊಂದಿನ ಏನು ಜರುಗಿದರೂ ಸಹಿಸಿಕೊಳ್ಳಬೇಕು. ಅಷ್ಟೇ ಅಲ್ಲೀವರೆಗೂ ಈ ದೆವ್ವದಂಥವನ್ನ (ಬೇರೆ ಮಾತು ಅಂದುಕೊಂಡೆ) ತಲೆಗೆ ಹಚ್ಚಿಕೊಳ್ಳಬಾರದು.

ಹಾಗಂದುಕೊಂಡ ಮೇಲೆ ಆರಾಮವಾಗಿ ಹಿಂದಕ್ಕೊರಗಿ ಕುಳಿತುಕೊಂಡೆ.

ಆಕೆ ಕೂಡ ಮಾತಾಡದೆ ಇದ್ದುಬಿಟ್ಟಳು.

ಚಿನ್ನು ನನ್ನ ಕಡೆ ನೋಡಿ ನೋಡಿ ಹಾಗೇ ನೋಡುತ್ತ ಇದ್ದು ಆಮೇಲೆ ಮತ್ತೆ ಮೊಬೈಲ್ ಫೋನಿನೊಳಗೆ ಹೋಗಲು ನೋಡಿದ. ಚಾರ್ಜಿಂಗ್ ಮುಗಿದುಹೋಗಿದ್ದರಿಂದ ಏನು ಮಾಡಬೇಕೋ ತಿಳಿಯದೆ ಮೆಲ್ಲಗೆ ಹೊರಗೆ ದೃಷ್ಟಿ ಹರಿಸಿದ.

ಕಾರು ಖೈರತಾಬಾದ್ ಚೌರಸ್ತಾಕ್ಕೆ ಬಂತು. ಅಲ್ಲಿಂದ ಲಕಡಿ ಕಾ ಫೂಲ್ ಆಮೇಲೆ ಬಷೀರ್‌ಬಾಗ್ ಏರಿಯಾ ಮೂಲಕ ಸಾಗಿ ಒಂದೆರಡು ಕಿಲೋಮೀಟರುಗಳ ನಂತರ ಒಂದು ಕಾಲೋನಿಗೆ ಬಂದು ಸೇರಿತು.